ಡಾ. ಮನಮೋಹನ್ ಸಿಂಗ್
ಬೆಂಗಳೂರು ನಗರ ವಿಶ್ವವಿದ್ಯಾಲಯ

Dr. Manmohan Singh
Bengaluru City University

Jnanajyothi Central College Campus, Dr. B.R AmbedkarVeedhi,
Bengaluru-560001E-Mail ID: registrar@bcu.ac.in

ಬೆಂ.ನ.ವಿ/ಶೈಕ್ಷಣಿಕ/ಸ್ನಾ.ಕೋ.ಪ್ರವೇಶ/2026-27/033 ದಿನಾಂಕ:01.07.2026

**2026–27ನೇ ಸಾಲಿನ ಸ್ನಾತಕೋತ್ತರ ಪದವಿ ಪ್ರವೇಶಾತಿಗೆ ಅಧಿಸೂಚನೆ**

2026–27ನೇ ಶೈಕ್ಷಣಿಕ ಸಾಲಿಗೆ ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ, ಸೆಂಟ್ರಲ್ ಕಾಲೇಜು ಆವರಣದ ಸ್ನಾತಕೋತ್ತರ ವಿಭಾಗಗಳು/ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಬ್ಯಾಟರಾಯನಪುರ, ಬಾಗಲೂರು ಮತ್ತು ಸಂಯೋಜಿತ ಕಾಲೇಜುಗಳಲ್ಲಿ ಲಭ್ಯವಿರುವ ಈ ಕೆಳಕಂಡ ಸ್ನಾತಕೋತ್ತರ ಕೋರ್ಸುಗಳ ಪ್ರವೇಶಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**(Through the UUCMS Online portal https://uucms.karnataka.gov.in/Login/Index)**

**ವಿಶ್ವವಿದ್ಯಾನಿಲಯದ ವಿಭಾಗಗಳಲ್ಲಿ/ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಬ್ಯಾಟರಾಯನಪುರ, ಬಾಗಲೂರು/ ಸಂಯೋಜಿತ ಕಾಲೇಜುಗಳಲ್ಲಿ ಲಭ್ಯವಿರುವ ಸ್ನಾತಕೋತ್ತರ ವಿಷಯಗಳು:**

| ಕ್ರ.ಸಂ | ಕೋರ್ಸುಗಳು | ಕೇಂದ್ರಗಳು |
|---|---|---|
| 1 | **ಕಲಾ ನಿಕಾಯ: ಎಂ. ಎ**<br>1. ಕನ್ನಡ 2. ಇಂಗ್ಲೀಷ್ 3. ಫ್ರೆಂಚ್ 4. ಜರ್ಮನ್ 5. ಸ್ಪಾನಿಷ್ 6. ಜಪಾನೀಸ್ 7. ಅರ್ಥಶಾಸ್ತ್ರ 8. ಇತಿಹಾಸ 9. ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ 10. ರಾಜ್ಯಶಾಸ್ತ್ರ 11. ಸಮಾಜ ಶಾಸ್ತ್ರ 12. ಸಮಾಜಕಾರ್ಯ<br>**ಪಿಜಿ ಡಿಪ್ಲೋಮಾ:**<br>1. ಚೈನಿಸ್ 2. ಜರ್ಮನ್ 3. ಜಪಾನೀಸ್ 4. ಫ್ರೆಂಚ್ 5. ಸ್ಪಾನಿಷ್ 6. ಕೋರಿಯನ್ 7. ಇಟಲಿಯನ್ | **ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಸೆಂಟ್ರಲ್ ಕಾಲೇಜು ಮುಖ್ಯ ಆವರಣ.** |
| | **ವಿಜ್ಞಾನ ನಿಕಾಯ: ಎಂ. ಎಸ್ಸಿ**<br>1. ಭೌತಶಾಸ್ತ್ರ 2. ರಸಾಯನಶಾಸ್ತ್ರ 3. ಗಣಿತಶಾಸ್ತ್ರ 4. ಜೀವರಸಾಯನಶಾಸ್ತ್ರ 5. ಪರಿಸರ ಮತ್ತು ಹವಮಾನ ಬದಲಾವಣೆ 6.ಸಸ್ಯಶಾಸ್ತ್ರ 7. ಪ್ರಾಣಿಶಾಸ್ತ್ರ 8. ಗಣಕ ವಿಜ್ಞಾನ 9.ಉಡುಪು ತಂತ್ರಜ್ಞಾನ ಮತ್ತು ನಿರ್ವಹಣೆ<br>**ಸ್ವಯಂ ಹಣಕಾಸು ಯೋಜನೆ ಅಡಿಯಲ್ಲಿ**<br>10. ಜೈವಿಕ ತಂತ್ರಜ್ಞಾನ 11.ಸೂಕ್ಷ್ಮಜೀವಶಾಸ್ತ್ರ 12.ಗ್ರಂಥಾಲಯ ಮತ್ತು ಮಾಹಿತಿ ತಂತ್ರಜ್ಞಾನ 13. ಮನಃಶಾಸ್ತ್ರ 14. ವಿಧಿ ವಿಜ್ಞಾನ ( ಫೋರೆನ್ಸಿಕ್ ಸೈನ್ಸ್) 15. ಆಹಾರ ಮತ್ತು ಪೌಷ್ಠಿಕಾಂಶ ವಿಜ್ಞಾನ 16. ಭ್ರೂಣಶಾಸ್ತ್ರ ಮತ್ತು ಸಂತಾನೋತ್ಪತ್ತಿ ತಂತ್ರಜ್ಞಾನ<br>**ಪಿಜಿ ಡಿಪ್ಲೋಮಾ:**<br>1. ಸೈಬರ್ ಸೆಕ್ಯುರಿಟಿ 2. ಬಯೋ ಇನ್ಫೋಮೆಟಿಕ್ಸ್ | |

| | | |
|---|---|---|
| | **ವಾಣಿಜ್ಯ ನಿಕಾಯ: ಎಂ ಕಾಂ**<br>**1.** ಸಾಮಾನ್ಯ 2. ಇಂಟರ್‌ನ್ಯಾಷನಲ್ ಬಿಸಿನೆಸ್ 3. ಫೈನಾನ್ಸಿಯಲ್ ಅನಾಲಿಸಿಸ್ 4. ಫಿನ್ ಟೆಕ್.<br><br>**ಪಿಜಿ ಡಿಪ್ಲೋಮಾ:**<br>**1.** ಬಿಸಿನೆಸ್ ಅಡ್ಮಿನಿಸ್ಟ್ರೇಷನ್ 2. ಮಾನವ ಸಂಪನ್ಮೂಲ ನಿರ್ವಹಣೆ 3. ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್ 4.ಫೈನಾನ್ಸಿಯಲ್ ಮ್ಯಾನೇಜ್‌ಮೆಂಟ್ 5.ಫಿನ್ ಟೆಕ್ | |
| | **ಶಿಕ್ಷಣ ನಿಕಾಯ :**<br>ಎಂ. ಎ – ಎಜುಕೇಷನ್ | |
| 2 | **ವಾಣಿಜ್ಯ ನಿಕಾಯ:**<br>**ಎಂ.ಕಾಂ** – ಸಾಮಾನ್ಯ | **ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಬ್ಯಾಟರಾಯನಪುರ, ಬಾಗಲೂರು ಬೆಂಗಳೂರು** |
| 3 | **ಕಲಾ ನಿಕಾಯ: ಎಂ.ಎ:**<br>1. ಕನ್ನಡ 2. ಇಂಗ್ಲೀಷ್ 3. ಇತಿಹಾಸ 4. ಅರ್ಥಶಾಸ್ತ್ರ 5. ಸಮಾಜ ಶಾಸ್ತ್ರ 6. ರಾಜ್ಯಶಾಸ್ತ್ರ 7. ಸಮಾಜಕಾರ್ಯ 8. ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ<br><br>**ಎಂ.ವಿ.ಎ:**<br>1. ಅನಿಮೇಷನ್‌ಡಿಸೈನ್ 2. ಇಂಟಿರಿಯರ್‌ಡಿಸೈನ್ 3. ಅಪ್ಲೈಡ್‌ಆರ್ಟ್ಸ್, 4. ಆರ್ಟ್ ಹಿಸ್ಟ್ರಿ 5. ಪೇಯಿಂಟಿಂಗ್ 6. ಪ್ರಿಂಟ್ ಮೆಕಿಂಗ್ 7.ಸ್ಕಲ್ಪಚರ್ | |
| | **ವಿಜ್ಞಾನ ನಿಕಾಯ: ಎಂ.ಎಸ್ಸಿ :**<br>**1** ಭೌತಶಾಸ್ತ್ರ 2.ರಸಾಯನಶಾಸ್ತ್ರ 3. ಗಣಿತಶಾಸ್ತ್ರ 4.ಜೀವರಸಾಯನಶಾಸ್ತ್ರ 5.ಸಸ್ಯಶಾಸ್ತ್ರ 6.ಪ್ರಾಣಿಶಾಸ್ತ್ರ 7.ಉಡುಪು ತಂತ್ರಜ್ಞಾನ ಮತ್ತು ನಿರ್ವಹಣೆ 8.ಗಣಕ ವಿಜ್ಞಾನ 10.ಜೈವಿಕ ತಂತ್ರಜ್ಞಾನ 11.ಸೂಕ್ಷ್ಮಜೀವಶಾಸ್ತ್ರ 12.ಮನಃಶಾಸ್ತ್ರ 13.ಮಾನಸಿಕ ಸಮಾಲೋಚನೆ 14.ಸ್ಪೀಚ್ ಲ್ಯಾಂಗ್ವೇಜ್ ಪ್ಯಾಥಾಲಾಜಿ 15.ಇಂಟೀರಿಯರ್ ಡಿಜೈನ್ ಅಂಡ್ ಡೆಕೋರೇಷನ್ 16.ನ್ಯೂಟ್ರೇಷನ್ ಅಂಡ್ ಡೈಟೆಟಿಕ್ಸ್<br><br>**ಪಿಜಿ ಡಿಪ್ಲೋಮಾ :**<br>ಮನೋವೈಜ್ಞಾನಿಕ ಸಮಾಲೋಚನೆ<br><br>**ವಾಣಿಜ್ಯ ನಿಕಾಯ: ಎಂ.ಕಾಂ**<br>**1.**ಸಾಮಾನ್ಯ 2. ಫೈನಾನ್ಸಿಯಲ್ ಅನಾಲಿಸಿಸ್ 3.ಇಂಟರ್‌ನ್ಯಾಷನಲ್ ಬಿಸಿನೆಸ್ 4. **ಎಂಟಿಟಿಎಂ:** ಮಾಸ್ಟರ್ ಆಫ್ ಟೂರಿಸಂ ಅಂಡ್ ಟ್ರಾವೆಲ್ ಮ್ಯಾನೇಜ್‌ಮೆಂಟ್ | **ಸಂಯೋಜಿತ ಕಾಲೇಜುಗಳು (ವಿವರಗಳಿಗೆ ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ಅನ್ನು ಪರಿಶೀಲಿಸುವುದು)** |

| | | |
|---|---|---|
| | **ಪಿಜಿ ಡಿಪ್ಲೋಮಾ:**<br>1 ಬಿಸಿನೆಸ್ ಅಡ್ಮಿನಿಸ್ಟ್ರೇಷನ್ 2 ಹ್ಯುಮನ್ ರಿಸೋರ್ಸ್ ಮ್ಯಾನೇಜ್‌ಮೆಂಟ್<br>3. ಫೈನಾನ್ಸಿಯಲ್ ಮ್ಯಾನೇಜ್‌ಮೆಂಟ್ | |

**<u>ಅರ್ಜಿ ಸಲ್ಲಿಸಲು ಮಾರ್ಗಸೂಚಿಗಳು:</u>**

1. ಅರ್ಹ ಅಭ್ಯರ್ಥಿಗಳು ಸ್ನಾತಕೋತ್ತರ ಕೋರ್ಸುಗಳಿಗೆ **UUCMS Portal** ಮೂಲಕವೇ **Online** ನಲ್ಲಿ **ದಿನಾಂಕ: 01.07.2026** ರಿಂದ **https://uucms.karnataka.gov.in** ನಲ್ಲಿ ಅರ್ಜಿಯನ್ನು **ಸಲ್ಲಿಸಬಹುದಾಗಿದೆ.**
2. ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ಅರ್ಹ ಕೋರ್ಸ್‌ಗಳಿಗೆ ಅರ್ಜಿಯನ್ನು ಸಲ್ಲಿಸಬಹುದು.
3. ಪದವಿಯ ಅಂತಿಮ ಪರೀಕ್ಷೆಗಳ ಫಲಿತಾಂಶ ನಿರೀಕ್ಷಿಸುತ್ತಿರುವ ಅಭ್ಯರ್ಥಿಗಳೂ ಸಹ ಅರ್ಜಿಯನ್ನು ಸಲ್ಲಿಸಬಹುದು.
4. ವಿದ್ಯಾರ್ಥಿಗಳು **ರೂ. 500/–**ಅರ್ಜಿ (ಪ.ಜಾ/ಪ.ಪಂ, ಪ್ರವರ್ಗ–1 ಮತ್ತು ತೃತೀಯ ಲಿಂಗ ಅಭ್ಯರ್ಥಿಗಳಿಗೆ ರೂ. 250/– ಕರ್ನಾಟಕ ಅಭ್ಯರ್ಥಿಗಳಿಗೆ ಮಾತ್ರ) ಶುಲ್ಕದೊಂದಿಗೆ **ಗರಿಷ್ಠ 3 ವಿಷಯಗಳಿಗೆ** ಅರ್ಜಿ ಸಲ್ಲಿಸಲು **UUCMS Portal** ನಲ್ಲಿ ಅವಕಾಶ ಕಲ್ಪಿಸಿದೆ. ಹಾಗೂ 3 ವಿಷಯಗಳಿಗಿಂತ ಹೆಚ್ಚಿನ ವಿಷಯಗಳಿಗೆ ಅರ್ಜಿ ಸಲ್ಲಿಸಿದಲ್ಲಿ ಹೆಚ್ಚುವರಿಯಾಗಿ **ರೂ. 100/– ಗಳನ್ನು** ಪ್ರತಿ ವಿಷಯಕ್ಕೆ ಪಾವತಿಸಬೇಕಾಗಿರುತ್ತದೆ. ಅಭ್ಯರ್ಥಿಗಳು ಆನ್‌ಲೈನ್ ಮೂಲಕವೇ UUCMS Payment link ಮೂಲಕ ಪಾವತಿಸಬೇಕು.
5. ಅರ್ಹತೆ, ಸೀಟ್ ಮ್ಯಾಟ್ರಿಕ್ಸ್ ಮತ್ತು ಕೋರ್ಸುಗಳ ಶುಲ್ಕದ ಮಾಹಿತಿಗೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಜಾಲತಾಣ: <u>http://bcu.ac.in / http://bcu.karnataka.gov.in</u> ಸಂಪರ್ಕಿಸಲು ಕೋರಿದೆ.
6. 2026–27ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಅರ್ಹ ಅಭ್ಯರ್ಥಿಗಳು ಆನ್‌ಲೈನ್‌ಯಲ್ಲಿ ಅರ್ಜಿಗಳನ್ನು **ದಿನಾಂಕ: 31.07.2026 ವರೆಗೆ ಯಾವುದೇ ದಂಡ ಶುಲ್ಕವಿಲ್ಲದೆ ಸಲ್ಲಿಸಬಹುದಾಗಿದ್ದು ಆನಂತರ ದಿನಾಂಕ: 10.08.2026 ರ ವರೆಗೆ ರೂ.250/– ದಂಡ ಶುಲ್ಕದೊಂದಿಗೆ ಸಲ್ಲಿಸಬಹುದಾಗಿದೆ.**
7. UUCMS ಮುಖಾಂತರ ಸಲ್ಲಿಸಿದ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು.
8. ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಭರ್ತಿ ಮಾಡಿದ ಮುದ್ರಿತ ಪ್ರತಿಯನ್ನು ಅಗತ್ಯವಿರುವ ಪೂರಕ ದಾಖಲೆಗಳೊಂದಿಗೆ ಖುದ್ದಾಗಿ ಅಥವಾ ನೊಂದಾಯಿತ ಅಂಚೆಯ ಮುಖಾಂತರ ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ತಾವು ಅರ್ಜಿಯಲ್ಲಿ ಆಯ್ದುಕೊಂಡಿರುವ ವಿಷಯಗಳ ವಿಭಾಗದ **"ಅಧ್ಯಕ್ಷರುಗಳಿಗೆ ಪ್ರತ್ಯೇಕವಾಗಿ ಸಲ್ಲಿಸಲು ಕೋರಿದೆ, ವಿಳಾಸ: ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು, ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಸೆಂಟ್ರಲ್ ಕಾಲೇಜು ಆವರಣ, ಡಾ|| ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು –560 001"** ಸಲ್ಲಿಸತಕ್ಕದ್ದು.
9. ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಸಲ್ಲಿಸಿದ ಅಥವಾ ಅಪೂರ್ಣವಾದ ಅರ್ಜಿಗಳನ್ನು ಯಾವುದೇ ಮಾಹಿತಿ ನೀಡದೇ ತಿರಸ್ಕರಿಸಲಾಗುವುದು.
10. **<u>ಸೂಚನೆ</u>:** ಯಾವುದೇ ಸ್ನಾತಕೋತ್ತರ ವಿಭಾಗಕ್ಕೆ ಕನಿಷ್ಠ 20 ವಿದ್ಯಾರ್ಥಿಗಳು ನೋಂದಣಿಯಾಗದಿದ್ದ ಪಕ್ಷದಲ್ಲಿ ವಿಶ್ವವಿದ್ಯಾನಿಲಯವು ಆ ಸ್ನಾಕತೋತ್ತರ ಕೋರ್ಸನ್ನು ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಆರಂಭಿಸುವುದಿಲ್ಲ.

11. ಹೆಚ್ಚಿನ ಮಾಹಿತಿಗಾಗಿ ಕುಲಸಚಿವರು, ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಇವರನ್ನು ಸಂಪರ್ಕಿಸಬಹುದಾಗಿದೆ. ಮಿಂಚಂಚೆ: registrar@bcu.ac.in& registrarbcu@gmail.com

ಆದೇಶದ ಮೇರೆಗೆ

ಕುಲಸಚಿವರು

ಕುಲಸಚಿವರು (ಆ)
ಡಾ. ಮನಮೋಹನ್ ಸಿಂಗ್
ಬೆಂಗಳೂರು ನಗರ ವಿಶ್ವವಿದ್ಯಾಲಯ
ಬೆಂಗಳೂರು - 560 001